


# ಹಾರೋ ಕಾರು!

■ **ಶಶಿಕುಮಾರ್ ಸಿ.**

ಚೆನ್ನೈ ಮೂಲದ ಸ್ಟಾರ್ಟ್‌ಅಪ್ ಕಂಪನಿ 'ವಿನಟ ಏರೋಮೊಬಿಲಿಟಿ'ಯು ವಿದ್ಯುತ್ ಚಾಲಿತ ಹೈಬ್ರಿಡ್ 'ಹಾರುವ ಕಾರು' (ಫ್ಲೈಯಿಂಗ್ ಕಾರ್) ಪ್ರಾತ್ಯಕ್ಷಿಕೆಯನ್ನು ಪರಿಚಯಿಸಿದೆ.

ಪ್ರಯಾಣಿಕರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಿ, ಅಭಿವೃದ್ಧಿಪಡಿಸಿರುವ ಈ ಪ್ರಾತ್ಯಕ್ಷಿಕೆಯನ್ನು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರ ಮುಂದೆ ಇತ್ತೀಚೆಗೆ ಪ್ರದರ್ಶಿಸಲಾಗಿದೆ. ಈ ಬಗ್ಗೆ ಕಂಪನಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಸಿಇಒ) ಯೋಗೇಶ್ ಅಯ್ಯರ್ ತಮ್ಮ ಟ್ವಿಟರ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಅಲ್ಲದೇ ಅವರು ಈ ಕಾರನ್ನು 'ಮದರ್ ಆಫ್ ಆಲ್ ಬರ್ಡ್ಸ್' ಎಂದು ಕರೆದಿದ್ದಾರೆ. ಕಂಪನಿಯ ಹೇಳುವ ಪ್ರಕಾರ, ಏಷಿಯಾದ ಮೊದಲ ವಿದ್ಯುತ್ ಚಾಲಿತ ಹೈಬ್ರಿಡ್ ಹಾರುವ ಕಾರು ಇದಾಗಲಿದೆ.

ಹಾರುವ ಈ ಕಾರನ್ನು ಜನರ ಪ್ರಯಾಣದ ಜೊತೆಗೆ, ಸರಕು ಸಾಗಣೆಕೆ ಮತ್ತು ವೈದ್ಯಕೀಯ ತುರ್ತು ಸೇವೆಗೂ ಬಳಸಬಹುದು. ಇದೇ ವರ್ಷದ ಅಕ್ಟೋಬರ್ 5ರಂದು ಲಂಡನ್‌ನಲ್ಲಿ ನಡೆಯಲಿರುವ ವಿಶ್ವದ ಅತಿದೊಡ್ಡ 'ಹೆಲಿಟೆಕ್ ಎಕ್ಸಿಬಿಷನ್'ನಲ್ಲಿ ತಾನು ಅಭಿವೃದ್ಧಿಪಡಿಸಿದ ಕಾರನ್ನು ವಿಶ್ವಕ್ಕೆ ಪರಿಚಯಿಸಲು ಸಕಲ ಸಿದ್ಧತೆಯನ್ನು ಕಂಪನಿ ನಡೆಸಿದೆ.

### ಕಾರಿನ ವಿಶೇಷ

ಈ ಕಾರಿನಲ್ಲಿ ಚಾಲಕ ಸೇರಿ ಇಬ್ಬರು ಪ್ರಯಾಣಿಸಬಹುದು. ರಸ್ತೆ ಹಾಗೂ ಆಗಸದಲ್ಲಿ ಸರಾಗವಾಗಿ ಚಲಿಸುವಂತೆ ಇದನ್ನು ರೂಪಿಸಿದ್ದು, ಇದರ ತೂಕ ಬರೋಬ್ಬರಿ 1100 ಕೆ.ಜಿ.ಯಷ್ಟು. ಟೇಕ್‌ಆಫ್ ನಂತರ ಸುಮಾರು 1300 ಕೆ.ಜಿ.ಯಷ್ಟು ಭಾರವನ್ನು ಕಾರು ನಿಭಾಯಿಸಬಲ್ಲದು. 250 ಕೆ.ಜಿ. ಯಷ್ಟು ಭಾರ ಹೊರಬಲ್ಲದು.

ಕಾರಿನ ಸುಸ್ಥಿರತೆಗೆ ಆದ್ಯತೆ ನೀಡಿರುವ ಸಂಸ್ಥೆ, ಎಂಟು ಏಕಾಕ್ಷ ರೋಟರ್, ಜೈವಿಕ ಇಂಧನ ಮತ್ತು ಬ್ಯಾಟರಿ ಮೂಲಕ ಚಲಿಸುವ ಡ್ಯುಯಲ್ ಮೋಡ್ ಆಯ್ಕೆಯನ್ನು ಒದಗಿಸಿದೆ. ಅದಕ್ಕೆ ಹೈಬ್ರೀಡ್ ಮೋಟಾರ್ ಅಳವಡಿಸಲಾಗಿದೆ. ಹೈಬ್ರೀಡ್ ಎಲೆಕ್ಟ್ರಿಕ್ ವರ್ಟಿಕಲ್ ಟೇಕ್ ಆಫ್ ಆ್ಯಂಡ್ ಲ್ಯಾಂಡಿಂಗ್ (VTOL) ವಿಧಾನವನ್ನೊಳಗೊಂಡ ಈ ಕಾರಿನಲ್ಲಿ ಬ್ಯಾಕ್‌ಅಪ್ ಪವರ್ ಆಯ್ಕೆಯೂ ಇದೆ. ಕಾರು ಹಾರುವ ಹಂತದಲ್ಲೇ ಜನರೇಟರ್ ಪವರ್ ಸರಬರಾಜು ವಿಧಾನದಲ್ಲಿ ತೊಡಕು ಎದುರಾದರೆ ಕಾರಿಗೆ ವಿದ್ಯುತ್ ಪೂರೈಸಲು ಪ್ರತ್ಯೇಕ ಬ್ಯಾಕ್‌ಅಪ್ ಪವರ್ ಆಯ್ಕೆ ನೀಡಲಾಗಿದೆ.

ಹಲವು ಫೀಚರ್‌ಗಳು ಇನ್‌ಬಿಲ್ಟ್ ರೂಪದಲ್ಲೇ ಲಭ್ಯವಾಗಲಿದ್ದು, ಚಾಲನೆ ವೇಳೆ ತೊಂದರೆಯಾಗದಂತೆ ಹಾಗೂ ಪ್ರಯಾಣಿಸುವಾಗ ವಿಶೇಷ ಅನುಭವ ಕಟ್ಟಿಕೊಡಲು ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟಲಿಜೆನ್ಸ್) ತಂತ್ರಜ್ಞಾನ ಆಧಾರಿತ 'ಡಿಜಿಟಲ್ ಇನ್‌ಸ್ಟ್ರುಮೆಂಟ್ ಪ್ಯಾನೆಲ್' ಸೌಲಭ್ಯವಿದೆ.

ನೋಡಲು ಅದ್ದೂರಿಯಷ್ಟೇ ಅಲ್ಲ, ಸುಂದರ ಮತ್ತು ಸ್ಮಾರ್ಟ್ ರೂಪದ ಈ ಕಾರಿನಲ್ಲಿ ಪ್ರಯಾಣಿಸುವಾಗ ಮನರಂಜನೆ ನೀಡಲು ಅಗತ್ಯವಾದ ಸೌಲಭ್ಯವಿದೆ. ಟ್ರ್ಯಾಕ್ ಮಾಡಲು 'ಜಿಪಿಎಸ್ ಟ್ರ್ಯಾಕರ್' ಸಹಾಯಕ್ಕೆ ಬಂದರೆ, ಪ್ರಯಾಣದ ವೇಳೆ ಆಗಸ ಮತ್ತು ಭೂಮಿಯ ಸೊಬಗಿನ ವಿಹಂಗಮ ನೋಟ ಕಣ್ತುಂಬಿಕೊಳ್ಳಲು 300 ಡಿಗ್ರಿಯಷ್ಟು ಕಾಣುವ ಪಾರದರ್ಶಕ ಶೈಲಿಯ ವಿಂಡೋಗಳನ್ನು ಕಾರಿಗೆ ಅಳವಡಿಸಲಾಗಿದೆ.

ಒಮ್ಮೆ ಈ ಕಾರು ಆಗಸಕ್ಕೆ ಜಿಗಿದರೆ ಸುಮಾರು 100 ಕಿಲೋಮೀಟರ್‌ನಷ್ಟು ದೂರವನ್ನು, ಗಂಟೆಗೆ 120 ಕಿಲೋಮೀಟರ್ ವೇಗದಲ್ಲಿ ಸಾಗಬಲ್ಲದು. ಗರಿಷ್ಠ 60 ನಿಮಿಷದವರೆಗೆ ಹಾರಬಲ್ಲ ಕಾರು ಭೂಮಿಯಿಂದ ಸುಮಾರು 3000 ಅಡಿ ಎತ್ತರಕ್ಕೆ ಹೋಗುವ ಸಾಮರ್ಥ್ಯ ಹೊಂದಿದೆ.

ಎರಡು ಪ್ಯಾರಾಚ್ಯೂಟ್ ಹಾಗೂ ಏರ್‌ಬ್ಯಾಗ್‌ಗಳನ್ನೊಳಗೊಂಡ ಕಾಕ್‌ಪಿಟ್ ಕಾರಿನಲ್ಲಿದೆ. ಅವಶ್ಯಕ್ಕಿಂತ ಹೆಚ್ಚಿನ ಸುರಕ್ಷತೆ ಕಲ್ಪಿಸುವ ನಿಟ್ಟಿನಲ್ಲಿ ಗಮನಹರಿಸಿರುವ ಕಂಪನಿ, ಕಾರಿನಲ್ಲಿ ಡಿಸ್ಟ್ರಿಬ್ಯೂಟೆಡ್ ಎಲೆಕ್ಟ್ರಿಕ್ ಪ್ರೊಪ್ಯುಲ್ಷನ್ (DEP) ವ್ಯವಸ್ಥೆ ಒದಗಿಸಿದೆ. ಪ್ರಯಾಣದ ವೇಳೆ ಯಂತ್ರಗಳೇನಾದರೂ ಕೈಕೊಟ್ಟರೆ ನೆರವಿಗೆ ಬರಲು ಒಂದಕ್ಕಿಂತ ಹೆಚ್ಚಿನ ಯಂತ್ರಗಳಿವೆ.

ಪ್ರಾಯೋಗಿಕವಾಗಿ ರೂಪಿಸಲಾಗಿರುವ ಈ ಕಾರಿನ ನಿರ್ಮಾಣಕ್ಕೆ ಅಗತ್ಯವಾದ ಖರ್ಚು ವೆಚ್ಚಗಳ ಬಗ್ಗೆ ಹಾಗೂ ಮಾರುಕಟ್ಟೆಗೆ ಬಂದಾಗ ಆಗಬಹುದಾದ ಅದರ ಮೌಲ್ಯದ ಬಗ್ಗೆ ಕಂಪನಿಯು ಮಾಹಿತಿ ಕೊಟ್ಟಿಲ್ಲ. ■


